# ಸಿವ್ಹಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.

## ಸಿ.ಸಿ. ನಂಃ **2091/2023**

ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ
ಗುರುಮಿಠಕಲ್ ಪೊಲೀಸ್ ಠಾಣೆ

// ವಿರುದ್ಧ //

ಆರೋಪಿತ ಃ ಹಣಮಂತು ತಂದೆ ಭೀಮಪ್ಪ ನೀರೆಟಿ,
ವಃ **40** ವರ್ಷ, ಸಾಃ ಕೇಶ್ವಾರ ಗ್ರಾಮ,
ತಾಃ ಗುರುಮಠಕಲ್, ಜಿಃ ಯಾದಗಿರಿ.

## <u>ದೋಷಾರೋಪಣೆ</u>

ನಾನು ಅರುಣ ಚೌಗುಲೆ ಬಿ.ಎ.,ಎಲ್.ಎಲ್.ಬಿ.,(Honors) ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂ.ಗಳು ಯಾದಗಿರಿ, ಈ ಕೆಳಕಂಡ ಆರೋಪಿತರು ಆದ ನಿಮ್ಮ ಮೇಲೆ ಈ ಮೂಲಕ ಕೆಳಕಂಡಂತೆ ಆರೋಪಕ್ಕೆ ಗುರಿಪಡಿಸುತ್ತೇನೆ.

1. ದಿನಾಂಕ 17.05.2023 ರಂದು ಮಧ್ಯಾಹ್ನ 01.00 ಗಂಟೆ ಸುಮಾರಿಗೆ ಗುರುಮಠಕಲ್ ಪೋಲಿಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ದಂತಾಪೂರ ಗ್ರಾಮದ ಸಿಮಾಂತರದಲ್ಲಿರುವ ಜಮೀನು ಸರ್ವೇ ನಂ.86/4 ನೇದ್ದರ 02 ಎಕರೆ 06 ಗುಂಟೆ ಜಮೀನಿನಲ್ಲಿ (ಗಡ್ಡದ ಹೊಲದಲ್ಲಿ) ಚಾಸಾ-1 ಶ್ರೀಮತಿ ರಾಮುಲಮ್ಮ ರವರು ತನ್ನ ಗಂಡನಾದ ಚಾಸಾ-4 ಶ್ರೀ ಬಾಬು ರವರ ಜೊತೆ ಹೊಲದಲ್ಲಿ ಬಿದ್ದಿರುವ ಕಸ, ಕಡ್ಡಿ ಮತ್ತು ತೊಗರಿ ಕಟ್ಟಿಗೆಗಳನ್ನು ಆರಿಸಿ, ಹೊಲ ಸ್ವಚ್ಚ ಮಾಡಿದ್ದು, ಚಾಸಾ-4 ರವರು ಫ್ಯೂಸ ಹಾಕಲು ಸದರಿ ಹೊಲದಿಂದ ಸ್ವಲ್ಪ ದೂರದಲ್ಲಿರುವ ಟಿ.ಸಿ ಕಡೆ ಹೋದಾಗ ಚಾಸಾ-1 ರವರು ತನಗೆ ದಣಿವು ಆಗಿದ್ದರಿಂದ ಸದರಿ ಹೊಲದ ಒಂದು ದಂಡಿಗೆ ಇರುವ ಬೇವಿನ ಗಿಡದ ಕೆಳಗೆ ಮಲಗಿದ್ದಾಗ ಹೊಲದಲ್ಲಿ ಚಾಸಾ-1 ರವರು ಒಬ್ಬರೆ ಇದ್ದಿದ್ದನ್ನು ನೋಡಿ ಆರೋಪಿತನಾದ ನೀವು ಸದರಿ ಹೊಲದಲ್ಲಿ ಅಕ್ರಮವಾಗಿ ಪ್ರವೇಶ ಮಾಡಿರುತ್ತೀರಿ. ಈ ಮೂಲಕ ಆರೋಪಿತನಾದ ನೀವು ಭಾ.ದಂ.ಸಂ.ಕಲಂ.447 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

2. ಈ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತನಾದ ನೀವು ಚಾಸಾ-1 ರವರ ಹತ್ತಿರ ಹೋಗಿ ಚಾಸಾ-1 ರವರ ಕೈ ಹಿಡಿದು ಬಾ ನನ್ನ ಜೊತೆಯಲ್ಲಿ ಮಲಗು ಅಂತಾ ಹೇಳಿರುತ್ತೀರಿ. ಈ ಮೂಲಕ ಆರೋಪಿತನಾದ ನೀವು ಭಾ.ದಂ.ಸಂ. ಕಲಂ 354(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

3. ಈ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ ಚಾಸಾ-1 ರವರು ಗಾಭರಿಯಾಗಿ ಎದ್ದು ಯಾಕೇ ಬಾವಾ ಈ ತಹ ಮಾಡುತ್ತಿದ್ದಿರಿ, ನನ್ನ ಗಂಡ ಟಿ.ಸಿ ಹತ್ತಿರ ಫ್ಯೂಸ ಹಾಕಲಿಕ್ಕೆ ಹೋಗಿದ್ದಾನೆ, ಅವರು ನೋಡಿದರೆ ಏನು ತಿಳಿದುಕೊಳ್ಳುತ್ತಾರೆ, ನನಗೆ ಬಿಟ್ಟು ಇಲ್ಲಿಂದ ಹೋಗು ಅಂತಾ ಹೇಳಿದಾಗ ಆರೋಪಿತನಾದ ನೀವು ಚಾಸಾ-1 ರವರಿಗೆ ಲೇ ಭೋಸಡಿ, ಸೂಳಿ, ನಿನ್ನ ಗಂಡ ಬಹಳ ದೂರ ಹೋಗಿದ್ದಾನೆ, ನಾನು ಹೇಳಿದಷ್ಟು ಕೇಳು, ಬಾ ನನ್ನ ಜೊತೆ ಮಲಗು ಇಲ್ಲದಿದ್ದರೆ ನಿನಗೆ ಬಿಡೋದಿಲ್ಲ ಕುತ್ತಿಗೆ ಹಿಸುಕಿ ಕೊಲೆ ಮಾಡುತ್ತೇನೆ ಅಂತಾ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಈ ಮೂಲಕ ಆರೋಪಿತನಾದ ನೀವು ಭಾ.ದಂ.ಸಂ. ಕಲಂ 504 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

4. ಈ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತನಾದ ನೀವು ಚಾಸಾ-1 ರವರಿಗೆ ಲೈಂಗಿಕ ಸಮ್ಮತಿಗಾಗಿ ಒತ್ತಾಯ ಮಾಡಿದ್ದಲ್ಲದೆ ಚಾಸಾ-1 ರವರ ಮೈ ಮೇಲಿರುವ ಸೀರೆ ಮತ್ತು ಕುಪ್ಪಸವನ್ನು ಹಿಡಿದು ಜಗ್ಗಾಡಿ ಬೆತ್ತಲೆಯಾಗುವಂತೆ ಒತ್ತಾಯಿಸಿರುತ್ತೀರಿ. ಈ ಮೂಲಕ ಆರೋಪಿತನಾದ ನೀವು ಭಾ.ದಂ.ಸಂ. ಕಲಂ 354(ಬಿ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

5. ಈ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ ಚಾಸಾ-1 ರವರು ಚಿರಾಡಲು ಪ್ರಾರಂಭಿಸಿದಾಗ ಆರೋಪಿತನಾದ ನೀವು ಕೈಯಿಂದ ಚಾಸಾ-1 ರವರ ಮುಖದ ಮೇಲೆ ಹೊಡೆದು ಗುಪ್ತಗಾಯ ಮಾಡಿರುತ್ತೀರಿ. ಈ ಮೂಲಕ ಆರೋಪಿತನಾದ ನೀವು ಭಾ.ದಂ.ಸಂ.ಕಲಂ.323 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

6. ಈ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತನಾದ ನೀವು ಚಾಸಾ-1 ರವರ ಕುತ್ತಿಗೆಗೆ ಕೈ ಹಾಕಿ ನೆಲಕ್ಕೆ ಕೆಡವಿ ಸೀರೆ, ಲಂಗಾ ಬಿಚ್ಚು ಅಂತಾ ಜಬರದಸ್ತಿ ಮಾಡಿರುತ್ತೀರಿ. ಈ ಮೂಲಕ ಆರೋಪಿತನಾದ ನೀವು ಭಾ.ದಂ.ಸಂ. ಕಲಂ 354 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

7. ಈ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ ಚಾಸಾ-1 ರವರು ಲಬೋ ಲಬೋ ಅಂತಾ ಬಾಯಿ ಮಾಡಿದಾಗ ಚಾಸಾ-4 ರವರು ಚಾಸಾ-1 ರವರು ಬಾಯಿ

ಮಾಡುವ ಸಪ್ಪಳ ಕೇಳಿ ಓಡುತ್ತಾ ತಮ್ಮ ಹೊಲದ ಕಡೆ ಬರುತ್ತಿರುವುದನ್ನು ನೋಡಿ ಆರೋಪಿತನಾದ ನೀವು ಚಾಸಾ-1 ರವರಿಗೆ ಬಿಟ್ಟು ಸೂಳಿ ಇವತ್ತು ಉಳಿದಿದ್ದಿ ನನ್ನ ಜೊತೆ ಮಲಗಿದರೆ ಸರಿ, ಇಲ್ಲದಿದ್ದರೆ ನಿನಗೆ ಖಲಾಸ ಮಾಡುತ್ತೇನೆ ಅಂತಾ ಜೀವದ ಬೆದರಿಕೆ ಹಾಕಿರುತ್ತೀರಿ. ಈ ಮೂಲಕ ಆರೋಪಿತನಾದ ನೀವು ಭಾ.ದಂ.ಸಂ.ಕಲಂ.506 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

<u>ಆರೋಪಿತನ ಹೇಳಿಕೆ</u>

ಪ್ರಶ್ನೆ-1ಃ ಮೇಲೆ ಓದಿ ಹೇಳಿದ ಆಪಾದನೆ/ದೋಷಾರೋಪಣೆ
ತಿಳಿಯಿತೆ ಅಥವಾ ಅರ್ಥವಾಯಿತೇ?

ಉತ್ತರಃ ತಿಳಿಯಿತು.

ಪ್ರಶ್ನೆ-2ಃ ನೀವು ತಪ್ಪೊಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗ
ಬಯಸುವಿರಾ?

ಉತ್ತರಃ ವಿಚಾರಣೆಯಾಗಬೇಕು.

(ಮೇಲಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಲಾಯಿತು.)

ದಿನಾಂಕಃ 17.07.2025

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ಯಾದಗಿರಿ.